# ಶ್ರೀರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಧರ್ಮಸಮನ್ವಯ

**ಸ್ವಾಮಿ ಭಜನಾನಂದ**

(ಹಿಂದಿನ ಸಂಚಿಕೆಯಿಂದ)

## ೧. ಬಹುತ್ವ ಅಥವಾ ಅನೇಕತ್ವ ಮನೋಭಾವ (Pluralism)

ಬಹುತ್ವ ವಾದವು ಎಲ್ಲ ಧರ್ಮಗಳೂ ಸತ್ಯ, ಸತ್ಯಪ್ರಕಾಶನಗಳು ಬಹುವಾಗಿವೆ ಮತ್ತು ಸ್ವರ್ಗಕ್ಕೆ ಅಥವಾ ಮೋಕ್ಷಕ್ಕೆ ಹಲವು ದಾರಿಗಳಿವೆ ಎಂಬುದನ್ನು ಎತ್ತಿ ಹಿಡಿಯುತ್ತದೆ. ಬಹುತ್ವ ವಾದ ಎನ್ನುವುದು ಒಂದು ತಾತ್ವಿಕ ಪರಿಕಲ್ಪನೆಯಾಗಿದ್ದು, ಸತ್ಯವು ಅತ್ಯುನ್ನತ ಮಟ್ಟದಲ್ಲಿ ಒಂದಕ್ಕಿಂತ ಹೆಚ್ಚು ರಚನೆ ಉಳ್ಳದ್ದು ಮತ್ತು ಮಾನವ ಚಿಂತನೆಯು ಈ ರಚನೆಗಳನ್ನು ಬಹು ವೈವಿಧ್ಯಮಯ ಮಾರ್ಗಗಳಲ್ಲಿ ಸಮೀಪಿಸಬಹುದು ಎಂಬ ಅರ್ಥವುಳ್ಳದ್ದಾಗಿದೆ. ವಿಶ್ವಧರ್ಮಗಳಿಗೆ ಸಂಬಂಧಪಟ್ಟ ಹಾಗೆ ಬಹುತ್ವ ಮನೋಭಾವವನ್ನು, ಪ್ರೊ. ಜಾನ್ ಹಿಕ್ ಅವರು ಈ ಮಾತುಗಳಲ್ಲಿ ವಿವರಿಸಿರುವರು: "ಅವುಗಳ ಮಧ್ಯೆ ಇದ್ದುಕೊಂಡು ಅಥವಾ ಅವುಗಳ ದಾರಿಯಲ್ಲಿ ನಡೆದು, ಸ್ತ್ರೀಯರು ಮತ್ತು ಪುರುಷರು ಸ್ವರ್ಗಗತಿ/ಮೋಕ್ಷ/ಸಾರ್ಥಕತೆಯನ್ನು ಹೊಂದಲು ಸಾಧ್ಯವಾಗುವ ಮೋಕ್ಷಮಾರ್ಗದ ಪರ್ಯಾಯ ಅವಕಾಶ ಅಥವಾ ಆಯಾಮಗಳೆಂದು (space), ಮಹಾನ್ ಧಾರ್ಮಿಕ ಸಂಪ್ರದಾಯಗಳನ್ನು ಪರಿಗಣಿಸಬೇಕು."

ಬಹುತ್ವ ವಾದವು ಪ್ರತಿಯೊಂದು ಧರ್ಮದ ವಿಶೇಷತೆಯನ್ನು ಕಡೆಗಣಿಸದೆ, ಅವುಗಳ ನಡುವೆ ಪರಸ್ಪರ ಅರಿವು ಮತ್ತು ಸಾಮರಸ್ಯಗಳನ್ನು ನಿರ್ಮಾಣ ಮಾಡುವ ವಿಧಾನವಾಗಿದೆ. ಇದನ್ನು ಅರ್ಥಮಾಡಿಕೊಳ್ಳಲು, ನಾವು ಉದಾಸೀನತಾ ವಾದ (Indifferentism) (ಇದರ ಬಗ್ಗೆ ಈ ಲೇಖನದ ಆರಂಭದಲ್ಲಿಯೇ ಪ್ರಸ್ತಾಪ ಮಾಡಲಾಗಿದೆ – ಜನವರಿ ೨೦೦೮ ರ ಸಂಚಿಕೆ ಪುಟ ೪೦ ನೋಡಿ) ಮತ್ತು ಸಾಪೇಕ್ಷವಾದದಿಂದ (Relativism) ಬೇರ್ಪಡಿಸಿ ನೋಡಬೇಕು. ಇವೆರಡೂ ತೀವ್ರ ವಾದಗಳು. ಬಹುತ್ವ ವಾದವು ಧರ್ಮಗಳ ಮಧ್ಯೆ ಇರುವ ವೈವಿಧ್ಯತೆಗಳು ಸತ್ಯವಾದವು ಮತ್ತು ನಿತ್ಯವಾದವು ಎಂದು ಮಾನ್ಯ ಮಾಡುತ್ತದೆ. ಅಂದರೆ, ಪ್ರತಿಯೊಂದು ಧರ್ಮದ ಸ್ವಾಯತ್ತತೆ, ಘನತೆ ಮತ್ತು ಸಮಂಜಸತೆಗಳನ್ನು ಮಾನ್ಯ ಮಾಡಿದ ಹಾಗಾಯಿತು. ಪ್ರೊ. ಜೇಮ್ಸ್ ಎಂ. ಲೀ ಹೇಳುವ ಹಾಗೆ, "ಬಹುತ್ವ ವಾದವು ವೈವಿಧ್ಯಮಯ ಧರ್ಮಗಳು ಒಂದೆಡೆ ಸೇರಿ, ಒಂದು ಸಮಾನಭಾವದಲ್ಲಿ ಲೀನವಾಗುವ ಕೇಂದ್ರವಲ್ಲ. ಅದಕ್ಕೆ ಬದಲಾಗಿ, ಇದೊಂದು ಚಿತ್ತಾರದ ಹಾಗಿದೆ. ಅದರಲ್ಲಿ ಎಲ್ಲ ಧರ್ಮಗಳೂ ತಮ್ಮ ಹಕ್ಕುಬಾಧ್ಯ, ಸ್ವತಂತ್ರ ಮತ್ತು ಪರಸ್ಪರ ಪ್ರಭಾವ ಬೀರಬಲ್ಲ ಸ್ಥಾನಗಳನ್ನು ಆಕ್ರಮಿಸಿಕೊಂಡಿರುತ್ತವೆ. ಇದು ಭಗವತ್ತತ್ತ್ವದ ಪರಿಪೂರ್ಣ ಚಿತ್ರವನ್ನು ಪ್ರದರ್ಶಿಸುತ್ತದೆ. ಒಂದು ಧರ್ಮವು, ಅದೆಷ್ಟೇ ವಸ್ತುನಿಷ್ಠ ಶ್ರೇಷ್ಠತೆಯನ್ನು ಗಳಿಸಿದ್ದರೂ, ತಾನಾಗಿಯೇ ಸಾಧಿಸಬಹುದಾಗಿರುವುದಕ್ಕಿಂತಲೂ ಹೆಚ್ಚಿನ ಸಮರ್ಪಕತೆಯನ್ನು ಈ ಪೂರ್ಣದರ್ಶನವು ಹೊಂದಿರುತ್ತದೆ."

**ಹಿಂದಿನ ಸಂಚಿಕೆಯಲ್ಲಿ**

ಶ್ರೀರಾಮಕೃಷ್ಣರು ಸರ್ವಧರ್ಮಸಮನ್ವಯಾಚಾರ್ಯರು. ಅವರಲ್ಲಿ ಧರ್ಮಸಮನ್ವಯದ ಭಾವನೆಯು ಉಗಮವಾಗಿದ್ದು ನೇರ ಅನುಭಾವಿಕ ರೂಪದಲ್ಲಿ. ಅವರಲ್ಲಿ ಅದು ವೇದ್ಯವಾಗಿದ್ದು, ಅಂತರಂಗದ ಅನ್ವೇಷಣೆ ಮತ್ತು ವೈಯಕ್ತಿಕ ಪ್ರಕಾಶನದ ರೂಪದಲ್ಲಿ. ಪಾಶ್ಚಾತ್ಯ ವಿದ್ವಾಂಸರು ಮುಖ್ಯವಾಗಿ ಮೂರು ಮನೋಭಾವಗಳನ್ನು ಗುರುತಿಸುತ್ತಾರೆ. ೧. ಪ್ರತ್ಯೇಕತಾ ಮನೋಭಾವ – ಇದು ಜಾಗತಿಕ ಶಾಂತಿಗೆ ಪ್ರಧಾನ ಅಡ್ಡಿಯಾಗಿದೆ. ೨. ಅಂತರ್ಗತ ಮನೋಭಾವ– ಇದನ್ನು ಕ್ರೈಸ್ತ ಮತ್ತು ಹಿಂದೂಧರ್ಮಗಳಲ್ಲಿ ಕಾಣಬಹುದು. ೩. ಬಹುತ್ವ ಅಥವಾ ಅನೇಕತ್ವ ಮನೋಭಾವ – (*ಇದರ ಬಗ್ಗೆ ಈ ತಿಂಗಳು ಓದಿ*)

ಹೀಗೆಂದ ಮಾತ್ರಕ್ಕೆ ವಿವಿಧ ಧರ್ಮಗಳು ಸರ್ವಥಾ ಬೇರೆಬೇರೆಯಾದವುಗಳು, ಸಾಪೇಕ್ಷವಾದುವುಗಳು ಹಾಗೂ ಆತ್ಯಂತಿಕ ಸತ್ಯವೆಂಬುದು ಇಲ್ಲವೇ ಇಲ್ಲ – ಎಂದು ಅರ್ಥವಲ್ಲ. ಆತ್ಯಂತಿಕ ಸತ್ಯ ಅಥವಾ ಪರತತ್ತ್ವವೆಂಬುದು ಇಲ್ಲದಿದ್ದರೆ, ಪ್ರತಿಯೊಂದು ಧರ್ಮವೂ ಒಂದು ದ್ವೀಪದಂತೆ ಏಕಾಂಗಿಯಾಗಿರುತ್ತಿತ್ತು. ಹಾಗಾದಾಗ, ಉನ್ನತ ಸ್ತರದಲ್ಲಿ ಅವುಗಳ ನಡುವೆ ಪರಸ್ಪರ ಸಂವಹನ ಸಾಧ್ಯವಾಗುತ್ತಿರಲಿಲ್ಲ. ಪ್ರೊ. ಗ್ರಾಂಟ್ ಎಸ್. ಶಾಕ್ಲಿ ಹೇಳುವಂತೆ, "ಬಹುತ್ವ ವಾದವೆಂದರೆ, ವಿಶ್ಲೇಷಣಾ ವಿಧಾನ. ಇದು (ಇಂದ್ರಿಯಾತೀತ ದರ್ಶನಗಳ) ವಿಮರ್ಶನಾತ್ಮಕ ಮೌಲ್ಯಮಾಪನ (critical evaluation), ಕೇಂದ್ರೀಕರಿಸುವಿಕೆ (focussing) ಮತ್ತು ವಿಷಯೀಕರಣಗಳಿಗೆ (objectifying) ಸಹಾಯ ಮಾಡುತ್ತದೆ. ನಿರಪೇಕ್ಷ ತತ್ತ್ವಗಳು (absolutes), ಸರ್ವಾನ್ವಯಿಗಳು (universals) ಮತ್ತು ವಿಶೇಷ ದರ್ಶನಗಳು (revelations) – ಇವೆಲ್ಲ ತಮಗೆ ತಾವೇ ಪ್ರಮಾಣೀಭೂತವಾಗಬಲ್ಲುವು. ( *ದೇವರು, ಸ್ವರ್ಗ, ನೀತಿ, ದರ್ಶನ, ಅನುಭಾವ ಮುಂತಾದವು ಈ ವರ್ಗಕ್ಕೆ ಸೇರುತ್ತವೆ. –ಸಂ.*) ಅವುಗಳಲ್ಲಿ ನಂಬಿಕೆ ಇಟ್ಟವರಿಗೆ ಅವು ಪ್ರಮಾಣೀಭೂತ ಸಂಗತಿಗಳೇ ಆಗಿವೆ. ಅವುಗಳೆಲ್ಲವೂ ಒಬ್ಬನೇ ವ್ಯಕ್ತಿಯಿಂದ ಅರಿಯಲಾಗದ ಒಂದು ವ್ಯಾಪಕ ಸತ್ಯದ ಅಥವಾ ಪರಿಪೂರ್ಣ ಸತ್ಯದ ತುಣುಕುಗಳು."

ಬಹುತ್ವ ಮನೋಭಾವವು ಬರಿಯ ದೈವಶಾಸ್ತ್ರೀಯ ವಿಷಯ ಮಾತ್ರವಲ್ಲ. ಹಾಗೆ ನೋಡಿದರೆ, ಬಹುತ್ವ ವಾದದಲ್ಲಿ ಪ್ರಾಯೋಗಿಕ ಆವಶ್ಯಕತೆಗಳೇ ಸಿದ್ಧಾಂತಗಳಿಗಿಂತ ಬಹು ಮುಖ್ಯವಾಗುತ್ತವೆ. ಪ್ರೊ. ಶಾಕ್ಲಿ ಹೇಳುತ್ತಾರೆ, " ಬಹುತ್ವ ವಿಧಾನದ ಸ್ವರೂಪ ಮತ್ತು ಬಗೆಗಳಾದರೂ ಏನು? ಮೂಲಭೂತವಾಗಿ ಅದು ಧರ್ಮ ಅಥವಾ ದೈವಶಾಸ್ತ್ರದ ಸ್ವಭಾವ ಮತ್ತು ಅರ್ಥವನ್ನು ತಾಳಿರುವ ಸಾಂಸ್ಕೃತಿಕ, ನೈತಿಕ, ಜನಾಂಗೀಯ ಮತ್ತು ಭಾಷಾವಾರು ವೈವಿಧ್ಯತೆಯ ಪರಿಸ್ಥಿತಿಯ ನಡುವೆಯೇ ಹೆಚ್ಚು ವ್ಯಾಪಕವಾಗಿಯೂ ಕಾರ್ಯಶೀಲವಾಗಿಯೂ ಅರಿಯಲು ಯತ್ನಿಸುತ್ತದೆ. ಅದಲ್ಲದೆ ವ್ಯಕ್ತಿಗಳು ಇನ್ನೂ ಹೆಚ್ಚಿನ ಸೃಜನಾತ್ಮಕತೆಯಿಂದಲೂ ವೈವಿಧ್ಯಮಯವಾಗಿಯೂ ಒಟ್ಟಾಗಿ ಬಾಳುವ ವಿಧಾನಗಳನ್ನು ಹುಡುಕುತ್ತದೆ; ಆರಿಸಿದ ಕೆಲವು ಸಾಮಾನ್ಯ ಧ್ಯೇಯಗಳನ್ನು ಸಾಂಘಿಕವಾಗಿ ಸಾಕಾರಗೊಳಿಸಿಕೊಳ್ಳುವ ಮಾರ್ಗಗಳನ್ನು ರೂಪಿಸುತ್ತದೆ."

ಧಾರ್ಮಿಕ ಕ್ಷೇತ್ರದಲ್ಲಿ ಬಹುತ್ವ ಮನೋಭಾವವನ್ನು ಪಾಶ್ಚಾತ್ಯ ಚಿಂತನೆಯಲ್ಲಿ ಪರಿಚಯಿಸಿದವರೆಂದರೆ ಮುಖ್ಯವಾಗಿ ಅರ್ನಾಲ್ಡ್

ಟಾಯ್ನಬಿ, ಡಬ್ಲ್ಯು. ಇ. ಹಾಕಿಂಗ್ ಮತ್ತು ಎರ್‌ನಸ್ಟ್ ಟ್ರೋಯಲ್‌ಟಸ್ಚ್. ಈ ಭಾವನೆಗೆ ಗಟ್ಟಿಯಾದ ಅಡಿಪಾಯವನ್ನು ಕೊಟ್ಟವರೆಂದರೆ, ಪೌಲ್ ತಿಲಿಚ್, ವಿಲ್ಫ್ರೆಡ್ ಕಾಂಟ್ವೆಲ್ ಸ್ಮಿತ್ ಮತ್ತು ಜಾನ್ ಹಿಕ್. ಧಾರ್ಮಿಕ ಬಹುತ್ವ ವಾದವನ್ನು ಪ್ರತಿಪಾದಿಸಿದ ಪ್ರೊ. ಜಾನ್ ಹಿಕ್ ಅವರು ಇತ್ತೀಚೆಗೆ ಪಾಶ್ಚಾತ್ಯ ದೇಶಗಳಲ್ಲಿ ಕಂಡು ಬರುವ ಬಹುತ್ವ ಆಂದೋಲನಕ್ಕೆ ಮುಖ್ಯ ಕಾರಣಕರ್ತರು. ತಾವು ನಿರ್ಮಿಸಿದ ಬಹುತ್ವ ಯೋಜನಾ ಪ್ರಕಾರವನ್ನು ಅವರು 'ಕೊಪರ್ನಿಕಸ್‌ನ ಕ್ರಾಂತಿ' ಎಂದು ಬಣ್ಣಿಸುತ್ತಾರೆ. ಅವರು ಹೇಳುತ್ತಾರೆ: "ಧರ್ಮಜಗತ್ತೆಂಬುವುದು ಒಬ್ಬನೇ ಭಗವಂತನನ್ನೇ ಕೇಂದ್ರವಾಗಿ ಉಳ್ಳದ್ದು ಎಂದು ಅರಿಯಬೇಕು. ಭಗವಂತನು ಸೂರ್ಯನಿದ್ದಂತೆ. ಅವನೇ ಜೀವ ಮತ್ತು ಬೆಳಕುಗಳ ಮೂಲ ಆಕರ. ಅವನನ್ನೇ (ಸೂರ್ಯನನ್ನು ಗ್ರಹಗಳು ಹೇಗೋ ಹಾಗೆ) ಎಲ್ಲ ಧರ್ಮಗಳೂ ತಮ್ಮದೇ ಆದ ರೀತಿಯಲ್ಲಿ ಪ್ರತಿಫಲಿಸುತ್ತವೆ."

ಅಮೆರಿಕೆಯ ಅಲಬಾಮಾ ವಿಶ್ವವಿದ್ಯಾನಿಲಯದ ಪ್ರೊ. ಜೇಮ್ಸ್ ಮೈಕೆಲ್ ಲೀ ಅವರು ಧಾರ್ಮಿಕ ಬಹುತ್ವ ವಾದದ ಎಂಟು ಮೂಲಭೂತ ತತ್ತ್ವಗಳನ್ನು ನಿರೂಪಿಸಿದ್ದಾರೆ.[೭] ಅವುಗಳ ಭಾವವನ್ನು ಸಂಕ್ಷಿಪ್ತವಾಗಿ ಇಲ್ಲಿ ನೀಡಲಾಗಿದೆ:

೧. ಪರಮ ಸತ್ಯವು ಒಂದು ಅವ್ಯಯವಾದ ರಹಸ್ಯವಾಗಿದೆ; ಅದು ವಿವಿಧ ಧರ್ಮಗಳಲ್ಲಿ ವಿವಿಧ ದರ್ಶನಾನುಭವಗಳ ಮೂಲಕ ಅಭಿವ್ಯಕ್ತಗೊಳ್ಳುತ್ತದೆ.

೨. ಪ್ರತಿಯೊಂದು ಧರ್ಮವೂ ಭಗವದ್ದರ್ಶನದ ಒಂದು ಪ್ರತ್ಯೇಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರತಿಕ್ರಿಯೆಯಾಗಿದೆ.

೩. ಯಾವುದೇ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರದಲ್ಲಿ ಬೆಳೆದು ಬಂದಿದ್ದರೂ ಪ್ರತಿಯೊಬ್ಬನೂ ಭಗವಂತನನ್ನು ತನ್ನದೇ ಆದ ವೈಯಕ್ತಿಕ ಬಗೆಯಲ್ಲಿ ಸಂಧಿಸುತ್ತಾನೆ.

೪. ಎಲ್ಲ ಧರ್ಮಗಳ ಅನುಯಾಯಿಗಳನ್ನೂ, ಅವರ ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದ ಹಾಗೆ, ಸಮಾನವಾಗಿ ಕಾಣಬೇಕು. (ಹಾಗೆಂದು, ಎಲ್ಲ ಧರ್ಮಗಳೂ ಸಮಾನವಾದುವು ಎಂದು ಇದರ ಅರ್ಥವಲ್ಲ.)

೫. ಇತರ ಧರ್ಮಗಳ ಸಿದ್ಧಾಂತಗಳನ್ನು ಮತ್ತು ಆಚರಣೆಗಳನ್ನು ಅರ್ಥಮಾಡಿಕೊಳ್ಳುವುದು ಆವಶ್ಯಕ.

೬. ಪ್ರತಿಯೊಂದು ಧರ್ಮವನ್ನೂ ಅದರ ಅನುಯಾಯಿಗಳು ಹೇಗೆ ಕಾಣುತ್ತಾರೋ ಹಾಗೆಯೇ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬೇಕು; ಅಹಿತಕಾರವಾದ ಹೋಲಿಕೆ ಇರಬಾರದು.

೭. ಪ್ರತಿಯೊಂದು ಧರ್ಮದ ಅನುಯಾಯಿಗಳೂ ಇತರ ಧರ್ಮದ ಅನುಯಾಯಿಗಳೊಡನೆ ಸಂವಾದದ ಮೂಲಕ ಮುಕ್ತವಾಗಿ ಪರಸ್ಪರ ಬೆರೆಯಬೇಕು.

೮. ಪ್ರತಿಯೊಂದು ಧರ್ಮದ ಅನುಯಾಯಿಗಳೂ ಇತರ ಧರ್ಮಗಳ ಉದಾತ್ತ ಅಂಶಗಳನ್ನು ಹೀರಿಕೊಂಡು ತಮ್ಮ ಧಾರ್ಮಿಕ ಪ್ರಜ್ಞೆಯನ್ನು ವಿಕಾಸಗೊಳಿಸಿಕೊಳ್ಳಬೇಕು.

ಮೇಲಿನ ಚರ್ಚೆಯಲ್ಲಿ ಪಾಶ್ಚಾತ್ಯ ಜಗತ್ತಿನ ದೈವಶಾಸ್ತ್ರಜ್ಞರಲ್ಲಿ ಸದ್ಯ ಪ್ರಚಲಿತವಿರುವ ಪ್ರಮುಖ ಚಿಂತನಾಸರಣಿಗಳನ್ನು ಪಟ್ಟಿ ಮಾಡಿದ್ದೇವೆ. ಈ ಸಂದರ್ಭದಲ್ಲಿ ಮೂರು ಮುಖ್ಯ ವಿಷಯಗಳು ಗಮನಾರ್ಹ:

೧. ಮೊದಲನೆಯದಾಗಿ, ಧಾರ್ಮಿಕ ಬಹುತ್ವ ಮನೋಭಾವವು ದೈವಶಾಸ್ತ್ರಜ್ಞರಿಂದಾಗಲೀ ಚರ್ಚ್‌ಗಳ ಅಧಿಕಾರಿಗಳಿಂದಾಗಲೀ ನಿರ್ಧರಿಸಬೇಕಾದ ವಿಷಯವಾಗಿ ಈಗ ಉಳಿದಿಲ್ಲ. ಇದೀಗ ಅದು ಸಾಮಾನ್ಯ ವ್ಯಕ್ತಿಯ ಕಳಕಳಿಯಾಗಿದೆ. ೧೯೬೦ ರಲ್ಲಿ ಅಮೆರಿಕ ಮತ್ತು ಯುರೋಪುಗಳನ್ನು ವ್ಯಾಪಿಸಿದ ಸಾಮಾಜಿಕ ಕ್ರಾಂತಿ, ಪೌರಸ್ತ್ಯ ಆಧ್ಯಾತ್ಮಿಕ ನೇತಾರರು ಮತ್ತು ಆಧ್ಯಾತ್ಮಿಕ ಭಾವನೆಗಳು ಪಾಶ್ಚಾತ್ಯ ಜಗತ್ತನ್ನು ಪ್ರವೇಶ ಮಾಡುತ್ತಿರುವುದು, ನೈತಿಕ ಅಧಿಕಾರದ ಲೌಕಿಕೀಕರಣ ಹಾಗೂ ಇತರ ಅಂಶಗಳು– ಸಾಂಘಿಕ ಧರ್ಮಗಳು ಪಾಶ್ಚಾತ್ಯ ಜನರ ಮನಸ್ಸುಗಳ ಮೇಲೆ ಚಲಾಯಿಸುತ್ತಿದ್ದ ಅಧಿಕಾರವನ್ನು ಮೊಟಕುಗೊಳಿಸಿದೆ. ಇನ್ನೊಂದು ಕಡೆ, ಪಾಶ್ಚಾತ್ಯ ಜಗತ್ತಿನಲ್ಲಿಯೇ ವಿವಿಧ ಧರ್ಮಗಳನ್ನು ಅನುಸರಿಸುವ ವಲಸೆಗಾರರು ಅತ್ಯಧಿಕ ಸಂಖ್ಯೆಯಲ್ಲಿ ವಾಸಿಸುತ್ತಿರುವುದರಿಂದ, ಅಲ್ಲಿನ ಜನರು ಬಹುಧಾರ್ಮಿಕ ಪ್ರಜ್ಞೆಯನ್ನು ಒಪ್ಪಿಕೊಳ್ಳಲೇಬೇಕಾದ ವಾಸ್ತವ ಸನ್ನಿವೇಶ ನಿರ್ಮಾಣವಾಗಿದೆ. ಇದರ ಪರಿಣಾಮವಾಗಿ ಸಾವಿರಾರು ಜನರು ಧಾರ್ಮಿಕ ಬಹುತ್ವ ವಾದವನ್ನು ನಂಬುತ್ತಿದ್ದಾರೆ ಮಾತ್ರವಲ್ಲದೆ, ಅದನ್ನು ತಮ್ಮ ಜೀವನದಲ್ಲಿ ಅನುಷ್ಠಾನಕ್ಕೂ ತರುತ್ತಿದ್ದಾರೆ.

೨. ಇದರಿಂದ ಬಹುತ್ವ ವಾದದ ಬಗೆಗಿನ ಚರ್ಚೆಯ ಮಹತ್ತ್ವವೇನೂ ಕುಂದಿಲ್ಲ. ಜನರ ಮನೋಭಾವವು ಅವರು ಸ್ವೀಕರಿಸುವ ಶಿಕ್ಷಣ ವಿಧಾನದ ಮೇಲೆ ಬಹುತೇಕ ಅವಲಂಬಿಸಿರುತ್ತದೆ. ಆದ್ದರಿಂದ ಧಾರ್ಮಿಕ ಬಹುತ್ವ ವಾದವು ಹಲವಾರು ದೇಶಗಳಲ್ಲಿ, ಶಿಕ್ಷಣತಜ್ಞರ ಮತ್ತು ಸರ್ಕಾರಗಳ ಗಮನವನ್ನು ಸೆಳೆದಿದೆ. ಅದಲ್ಲದೆ, ಧಾರ್ಮಿಕ ಮುಖಂಡರು ಪ್ರತ್ಯೇಕತೆಯ ಅಭಿಪ್ರಾಯಗಳಿಗೇ ಗಂಟು ಬಿದ್ದಿದ್ದರೆ, ಅವರು ಅಲ್ಪಸ್ವಲ್ಪ ಒಳಿತನ್ನು ಮಾಡುವುದಿರಲಿ, ಬಹುತೇಕ ಕೇಡನ್ನೇ ಎಸಗುತ್ತಾರೆ. ವಾಸ್ತವ ಪರಿಸ್ಥಿತಿ ಏನೆಂದರೆ, ಮೂಲಭೂತ ವಾದ ಅನೇಕ ದೇಶಗಳಲ್ಲಿ ವೃದ್ಧಿಯಾಗುತ್ತಲೇ ಇದೆ. ಸಾಮಾಜಿಕ ಸೌಹಾರ್ದತೆಗೆ ಭಂಗ ತರುವ ಈ ಸಮಸ್ಯೆಗೆ ತಕ್ಕ ಪರಿಹಾರವೆಂದರೆ ಧಾರ್ಮಿಕ ಬಹುತ್ವದ ಮೂಲಾಧಾರ ತತ್ತ್ವಗಳನ್ನು ಧಾರ್ಮಿಕ ಮುಖಂಡರ ಮನಸ್ಸುಗಳಲ್ಲಿ ಸುಭದ್ರಗೊಳಿಸುವುದೇ ಆಗಿದೆ.

೩. ಮೇಲೆ ವಿವರಿಸಿದಂತಹ ಬಹುತ್ವ ವಾದದ ಬಗೆಗಳು ಪಾಶ್ಚಾತ್ಯ ಕಲ್ಪನೆಗಳಾಗಿದ್ದು, ಪಾಶ್ಚಾತ್ಯ ಧಾರ್ಮಿಕ ಮತ್ತು ತಾರ್ಕಿಕ ಪ್ರಮೇಯಗಳ ಮೇಲೆ ಆಧಾರಿತವಾಗಿವೆ. ಆದ್ದರಿಂದ ಇವು ಭಾರತದ ಸಾಮಾಜಿಕ ಮತ್ತು ಧಾರ್ಮಿಕ ಪರಿಸ್ಥಿತಿಗೆ ಅಷ್ಟೇನೂ ಸಮಂಜಸವೆನಿಸುವುದಿಲ್ಲ.

## ಭಾರತೀಯ ಸಾಮಾಜಿಕ ಮತ್ತು ಧಾರ್ಮಿಕ ದೃಷ್ಟಿ

ಭಾರತೀಯರ ಸಾಮಾಜಿಕ ಮತ್ತು ಧಾರ್ಮಿಕ ದೃಷ್ಟಿಯು ಎರಡು ಮೂಲಭೂತ ಸಂಗತಿಗಳಿಂದ ಮೂಡಿಬಂದುದಾಗಿದೆ: ೧. ಭಾರತೀಯ ಗುಣವೈಶಿಷ್ಟ್ಯ ೨. ಭಾರತೀಯ ಧಾರ್ಮಿಕ ಪ್ರಜ್ಞೆ.

ಇತಿಹಾಸದುದ್ದಕ್ಕೂ, ಎಲ್ಲ ಕಾಲದಲ್ಲಿಯೂ ಭಾರತೀಯ ಗುಣವೈಶಿಷ್ಟ್ಯದ (ಸಾಮಾಜಿಕ ದೃಷ್ಟಿಕೋನ ಮತ್ತು ಸಂಬಂಧಗಳನ್ನು ನಿರ್ಧರಿಸುವ ಮಾರ್ಗದರ್ಶಿ ಸೂತ್ರಗಳು ಎಂದು ಇದರ ಅರ್ಥ) ಲಕ್ಷಣಗಳು **ಸಮನ್ವಯ** ಮತ್ತು **ಅಹಿಂಸೆ**. ಈಗ ಬಹು ವಿಕೃತಗೊಂಡಿರುವ

ಜಾತಿಪದ್ಧತಿಯಲ್ಲಿ ಕೂಡ ಪ್ರತಿಯೊಂದು ಗುಂಪಿಗೂ ಸಾಮಾಜಿಕ ರಚನೆಯಲ್ಲಿ ಒಂದು ನಿರ್ದಿಷ್ಟ ಸ್ಥಾನವನ್ನು ಕಲ್ಪಿಸಲಾಗಿತ್ತು. ಇದರಿಂದ ಸ್ಪರ್ಧೆ ಮತ್ತು ಸಂಘರ್ಷಗಳನ್ನು ಬಹುಮಟ್ಟಿಗೆ ನಿವಾರಿಸಲಾಗಿತ್ತು. ವಿವಿಧ ಧರ್ಮಗಳು, ಭಾಷೆಗಳು ಮತ್ತು ಜನಾಂಗೀಯ ಗುಂಪುಗಳಿಗೆ ಸೇರಿದ ಜನರು ಶಾಂತಿಯಿಂದ ಸಹಬಾಳ್ವೆ ನಡೆಸುತ್ತಿದ್ದರು. ಈ ಬಗೆಯ ಸಮನ್ವಯ ಮನೋಭಾವವಿದ್ದುದರಿಂದಲೇ ಭಾರತೀಯ ಸಮಾಜವು ಮಧ್ಯ ಏಷಿಯಾ ಖಂಡದಿಂದ ಬಂದ ಕ್ರೈಸ್ತ, ಯಹೂದಿ, ಪಾರ್ಸಿ ಮತ್ತು ಇಸ್ಲಾಂ ಧರ್ಮಗಳಿಗೆ ಸೇರಿದ ಹಲವು ವಲಸೆಗಾರರ ತಂಡಗಳಿಗೆ ಆಶ್ರಯವನ್ನು ನೀಡಲು ಸಾಧ್ಯವಾಯಿತು.

ಅದಲ್ಲದೆ ಭಾರತೀಯ ಜನರಲ್ಲಿ ಕಾಣಬರುವ ಅಹಿಂಸಾತ್ಮಕ ಮನೋಭಾವವು ಧಾರ್ಮಿಕ ಶೋಷಣೆಯು ಬೃಹತ್ ಪ್ರಮಾಣದಲ್ಲಿ ನಡೆಯುವುದನ್ನು ತಡೆಗಟ್ಟಿತ್ತು. ಆ ಕಾಲದಲ್ಲಿ ಧಾರ್ಮಿಕ ಭಿನ್ನಾಭಿಪ್ರಾಯಗಳಿದ್ದವು ಮತ್ತು ಧಾರ್ಮಿಕ ಸಂಘರ್ಷಗಳೂ ಇದ್ದವು ಎನ್ನುವುದು ನಿಸ್ಸಂದೇಹ. ಆದರೆ, ಅವು ಮುಗ್ಧ ಜನರ ಬೃಹತ್ ಪ್ರಮಾಣದ ಕಗ್ಗೊಲೆ, ಹತ್ಯಾಕಾಂಡ ಅಥವಾ ದಹನದ ಮಟ್ಟಕ್ಕೆ ಸಿಡಿದೇಳಲಿಲ್ಲ ಎನ್ನುವುದೂ ಅಷ್ಟೇ ನಿಜ.

ಹಾಗಾದರೆ, ನಿರ್ದಿಷ್ಟವಾದ ಭಾರತೀಯ ಗುಣವೈಶಿಷ್ಟ್ಯವನ್ನು ರೂಪುಗೊಳಿಸಿದ ಶಕ್ತಿ ಅದಾವುದು? *ಭಗವತ್ತತ್ತ್ವದ ಸರ್ವವ್ಯಾಪಕತೆಯ ಪರಿಜ್ಞಾನ* ಎಂದು ಹೇಳಬಹುದು. ಅದು ಹೇಗೋ ಏನೋ, ಪ್ರಾಚೀನ ಇತಿಹಾಸದ ಯಾವುದೋ ಒಂದು ಘಟ್ಟದಲ್ಲಿ, ಭಾರತೀಯ ಮನಸ್ಸು ಈ ಮಹಾನ್ ಸತ್ಯವನ್ನು ಗ್ರಹಿಸಿತು. ಭಗವಂತನು ಈ ವಿಶ್ವದ ಚರಾಚರ ವಸ್ತುಗಳೆಲ್ಲದರಲ್ಲಿ ಅಖಂಡ ಆಧ್ಯಾತ್ಮಿಕ ಅನಂತ ವಸ್ತುವಾಗಿ ನೆಲೆಸಿದ್ದಾನೆ; ಪರಮಾತ್ಮನು ಮೇಲೆಲ್ಲೋ, ಆಗಸದಲ್ಲಿ ನೆಲೆಸಿರುವ ಜೀವಿಯಲ್ಲ; ಅದಕ್ಕೆ ಬದಲಾಗಿ, ಈ ಸೃಷ್ಟಿಯಲ್ಲಿ ಅನುಸ್ಯೂತವಾಗಿರುವ ಚೈತನ್ಯಸ್ವರೂಪನು; ಇಡೀ ಜಗತ್ತೇ ದಿವ್ಯತೆಯಿಂದ ತುಂಬಿಕೊಂಡಿದೆ – ಈ ತಾತ್ತ್ವಿಕ ಜಿಜ್ಞಾಸೆಯೇ ಭಾರತೀಯ ಗುಣವೈಶಿಷ್ಟ್ಯವನ್ನು ರೂಪುಗೊಳಿಸಿದ ಶಕ್ತಿ ಎನ್ನಬಹುದು.

ದಿವ್ಯತೆಯ ಸರ್ವವ್ಯಾಪಕತ್ವದ ಐಕ್ಯತೆಯ ಭಾವನೆಯು ೧. ಎಲ್ಲರಲ್ಲಿ ಸಮನ್ವಯದ ಭಾವವನ್ನುಂಟುಮಾಡಿತು. ೨. ಎಲ್ಲವನ್ನೂ ಗೌರವಿಸುವ ಭಾವವನ್ನು ಮೂಡಿಸಿತು. ಪ್ರತಿಯೊಬ್ಬ ವ್ಯಕ್ತಿ ಮಾತ್ರವಲ್ಲ, ಈ ವಿಶ್ವದಲ್ಲಿರುವ ಎಲ್ಲವೂ – ಮರಗಳು, ನದಿಗಳು, ಬೆಟ್ಟಗಳು – ಇವೆಲ್ಲವುಗಳ ಅಂತರಂಗದಲ್ಲಿ ದಿವ್ಯತೆ ಅಡಗಿದೆ ಮತ್ತು ಇವುಗಳೆಲ್ಲವನ್ನೂ ಗೌರವದಿಂದ ಕಾಣಬೇಕು ಎಂಬ ಪರಿಕಲ್ಪನೆಯನ್ನು ಸರ್ವವ್ಯಾಪಕತ್ವದ ಐಕ್ಯತೆಯ ಭಾವನೆಯು ಹುಟ್ಟುಹಾಕಿತು.

ನಾವೀಗ ಭಾರತೀಯ ಸಾಮಾಜಿಕ ಮತ್ತು ಧಾರ್ಮಿಕ ದೃಷ್ಟಿಯ ಎರಡನೆಯ ಅಂಶವನ್ನು ಗಮನಿಸೋಣ. ಅದೆಂದರೆ, **ಭಾರತೀಯರ ಧಾರ್ಮಿಕಪ್ರಜ್ಞೆ**. ಭಾರತೀಯ ಸಂಸ್ಕೃತಿಯಲ್ಲಿ, ಎಂದೆಂದಿಗೂ, ಧರ್ಮವನ್ನು ಪರತತ್ತ್ವ ಅಥವಾ ಪರಮಸತ್ಯದ ಅನ್ವೇಷಣೆಯೆಂದೇ ಪರಿಗಣಿಸಲಾಗುತ್ತಿತ್ತು. ಅದನ್ನು ಈ ಜಗತ್ತಿನಲ್ಲಿ ನೈತಿಕತೆಯನ್ನು ನೆಲೆನಿಲ್ಲಿಸುವ ಉದ್ದೇಶದಿಂದ, ಭಗವಂತನಿತ್ತ ಆದೇಶಗಳಿಗೆ ಸಮಾಜವು ಸ್ಪಂದಿಸಿದ ಬಗೆಯೆಂದು ಮಾತ್ರ ತಿಳಿದಿರಲಿಲ್ಲ. ಪ್ರಾಚೀನ ಭಾರತೀಯ ಋಷಿಮುನಿಗಳು ಎಂದೆಂದೂ ಪರಿವರ್ತನೆಯಾಗುತ್ತಿರುವ ಮತ್ತು

ಪ್ರಚಲಿತ ಪಾಶ್ಚಾತ್ಯ ವಿಶ್ವವಿಜ್ಞಾನವು ವಿಶ್ವದ ಉಗಮವನ್ನು ಭೌತವಸ್ತುವೆಂದು ಭಾವಿಸಿದರೆ, ಭಾರತವು ವಿಶ್ವದ ಹುಟ್ಟಿನ ಪವಿತ್ರ ಮೂಲವನ್ನು ಆಧ್ಯಾತ್ಮಿಕವೆಂದು ಭಾವಿಸುತ್ತದೆ. ವೇದಾಂತವು ಅದನ್ನು ನಿರ್ದೇಶಿಸುವ ಹಾಗೆ ಅದು ಅನಂತ, ಅದ್ವಯ ಮತ್ತು ಚಿನ್ಮಯ. ಪ್ರಕೃತಿಯು ವಿಭಕ್ತ ಮತ್ತು ಅವಿಭಕ್ತ ಎಂಬ ಎರಡು ಆಯಾಮಗಳಲ್ಲಿದೆ ಎಂದು ವೇದಾಂತ ಹೇಳುತ್ತದೆ. ವಿಭಕ್ತ ಎಂದರೆ ನಾವು ನೋಡುತ್ತಿರುವ ಈ ಪ್ರತ್ಯಕ್ಷ ವಿಶ್ವ; ಇದರ ಹಿಂದಿರುವುದು ಅವ್ಯಕ್ತ – ಪ್ರಕೃತಿಯ ಅವಿಭಕ್ತ ಸ್ಥಿತಿ – ಪಾಶ್ಚಾತ್ಯ ಜ್ಯೋತಿರ್ವಿಜ್ಞಾನದ ಮಹಾಸ್ಫೋಟಕ್ಕಿಂತ ಮುಂಚೆ ಯಾವ ಸ್ಥಿತಿ ಇತ್ತೋ ಅದು. ಅವ್ಯಕ್ತದಿಂದ ಹೊರಹೊಮ್ಮಿದ್ದು ವ್ಯಕ್ತ; ಈ ಬ್ರಹ್ಮಾಂಡದಲ್ಲಿ ಇಂದು ನಮಗೆ ತಿಳಿದಿರುವ, ಇನ್ನೂ ತಿಳಿಯಬೇಕಾಗಿರುವ ಮಿಲಿಯಗಟ್ಟಲೆ ವಿಶ್ವಗಳಿವೆ; ಬ್ರಹ್ಮನಿಂದ ಬಂದಿರುವ ಈ ಬ್ರಹ್ಮಾಂಡವು ಒಂದು ಸುವ್ಯವಸ್ಥಿತ ಕ್ರಮದಲ್ಲಿ, ಅಂದರೆ ಅವಿಭಕ್ತ ಸ್ಥಿತಿಯಿಂದ ವಿಭಕ್ತ ಸ್ಥಿತಿಗೆ ವಿಕಾಸಹೊಂದಿದೆ. ವಿಶ್ವದ ವಿಕಾಸ, ಜೀವಿಗಳ ವಿಕಾಸ, ಅನಂತರ ಮಾನವನ (ಬೌದ್ಧಿಕ, ನೈತಿಕ, ಆಧ್ಯಾತ್ಮಿಕ) ವಿಕಾಸ – ಹೀಗೆ ಇದು ಒಂದು ವಿಕಾಸದ ಸರಣಿಯನ್ನು ಅನುಸರಿಸುತ್ತದೆ. ಇದು ವೇದಾಂತದ ವಿಶ್ವವಿಜ್ಞಾನದಲ್ಲಿ ಬಳಸಿರುವ ಭಾಷೆ.

–ಸ್ವಾಮಿ ರಂಗನಾಥಾನಂದ

(ಭಗವದ್ಗೀತೆಯ ವಿಶ್ವಸಂದೇಶ, ಪುಟ ೧೭–೧೮)

ಕ್ಷಣಿಕವಾದ ಈ ಜಗತ್ತಿನಾಚೆಗೆ ಅಪರಿವರ್ತನಶೀಲವೂ ಅವಿನಾಶಿಯೂ ಆದ, ಶುದ್ಧಚೈತನ್ಯಸ್ವರೂಪವಾದ ಪರತತ್ತ್ವವಿರುವುದೆಂದು ಕಂಡುಕೊಂಡಿದ್ದರು. ಅದನ್ನವರು 'ಬ್ರಹ್ಮನ್' (ದೊಡ್ಡದು) ಎಂದು ಕರೆದರು. ಬ್ರಹ್ಮವಸ್ತುವಿನ ಕ್ರಿಯಾತ್ಮಕ ಅಂಶಕ್ಕೆ 'ಈಶ್ವರ' ಅಥವಾ 'ದೇವರು' ಎಂದು ಕರೆದರು.

**ವಿಶ್ವಾತೀತತೆ, ಸರ್ವವ್ಯಾಪಕತೆ** –ಇವೆರಡೂ ಅಂಶಗಳು ಒಗ್ಗೂಡಿ, ಪರಿಪೂರ್ಣ ತತ್ತ್ವವೆನಿಸುವುದು. ಇದು ಜಡವಾದ ವಸ್ತುವಲ್ಲ, ಚೈತನ್ಯ ಸ್ವರೂಪ. ವೇದದಲ್ಲಿ ಅದನ್ನು 'ವಿಶ್ವಪುರುಷ' ನೆಂದು ಚಿತ್ರಿಸಲಾಗಿದೆ. ಅವನು ಸಹಸ್ರಾರು ಶಿರಗಳುಳ್ಳವನು, ಸಹಸ್ರಾರು ಕಣ್ಣುಗಳು, ಸಹಸ್ರಾರು ಹಸ್ತಗಳು ಮತ್ತು ಕಾಲುಗಳುಳ್ಳವನು. ವಿಶ್ವದ ತುಂಬೆಲ್ಲ ಓತಪ್ರೋತವಾಗಿರುವ ಪುರುಷನ ಈ ಅಂಶವು ಅವನ ಕಾಲುಭಾಗದಷ್ಟೇ ಆಗಿದೆ. ಪುರುಷನ ವಿಶ್ವಾತೀತ ಅಂಶವು ಉಳಿದ ಮುಕ್ಕಾಲು ಭಾಗದಷ್ಟಿದೆ. ಹೀಗೆ ಪುರುಷಸೂಕ್ತವು ಅದನ್ನು ವರ್ಣಿಸುತ್ತದೆ. ಹೀಗೆ ವೇದಗಳಲ್ಲಿ ವರ್ಣಿಸಲಾಗಿರುವ ಪುರುಷಾಕೃತಿಯು ಸಮಸ್ತ ವಿಶ್ವವು ಒಂದೇ ಸ್ವರೂಪದ್ದೆಂಬುದನ್ನು ಸೂಚಿಸುತ್ತದೆ.

ದೇಹದಲ್ಲಿರುವ ಜೀವಕೋಶಗಳು, ಅಂಗಾಂಗಗಳು ಮತ್ತು ಅಂಗಗಳು – ಇವೆಲ್ಲವೂ ಸೇರಿಕೊಂಡೇ ಹೇಗೆ ಒಂದು ದೇಹವಾಗುವುದೋ ಹಾಗೆಯೇ ಪ್ರಪಂಚದಲ್ಲಿರುವ ಎಲ್ಲವೂ ಸೇರಿಕೊಂಡು ಒಂದು ವಿಶ್ವಸ್ವರೂಪವಾಗುವುದು. ಹೀಗಾಗಿ ಈ ಜಗತ್ತಿನಲ್ಲಿರುವುದೆಲ್ಲವೂ ಒಂದಕ್ಕೊಂದು ಬೆಸೆದುಕೊಂಡಿರುತ್ತದೆ.

ಪ್ರಾಚೀನ ಭಾರತದೇಶದಲ್ಲಿ ಸಾಧಿಸಲಾದ ಮೇಲಿನದಷ್ಟೇ ಮಹತ್ವಪೂರ್ಣವಾದ ಮತ್ತೊಂದು ಅನ್ವೇಷಣೆಯೆಂದರೆ, ಪರಮತತ್ತ್ವವು ಒಂದೇ ಆಗಿದ್ದರೂ, ಮಾನವನ ಮನಸ್ಸು, ಅದರ ಹಲವು ವಿಧದ ಸ್ವಭಾವಕ್ಕನುಸಾರವಾಗಿ, ಆ ಪರತತ್ತ್ವವನ್ನು ಹಲವು ವಿಧಗಳಿಂದ

ಅರಿಯುವುದು ಎನ್ನುವ ತತ್ವ. ಇದರ ಫಲವಾಗಿ, ಒಂದೇ ಪರಮ ಸತ್ಯವು ಹಲವಾರು ದೇವತಾವಿಶೇಷಗಳ ರೂಪದಲ್ಲಿ ಕಾಣಬರುತ್ತದೆ. ವೈದಿಕ ಋಷಿಗಳು ಈ ಭಾವನೆಯನ್ನು **"ಏಕಂ ಸತ್ ವಿಪ್ರಾ ಬಹುಧಾ ವದಂತಿ"** – *ಸತ್ಯ ಒಂದೇ; ತಿಳಿದವರು ಅದನ್ನು ಹಲವಾರು ಹೆಸರುಗಳಿಂದ ಕರೆಯುವರು* – ಎಂಬ ವಾಕ್ಯದಲ್ಲಿ ವ್ಯಕ್ತಪಡಿಸಿದ್ದಾರೆ.

ಬೇರೆ ಮಾತುಗಳಲ್ಲಿ ಹೇಳುವುದಾದರೆ, ವಿವಿಧತೆಯಲ್ಲಿ ಏಕತೆಯ ಸಿದ್ಧಾಂತವು ಭಾರತೀಯ ಬಹುತ್ವ ವಾದದ ಮೂಲಾಧಾರವಾಗಿದೆ. ಬಹುತ್ವ ವಾದದ ಪಾಶ್ಚಾತ್ಯ ಕಲ್ಪನೆಯು ವಿಶ್ಲೇಷಣಾತ್ಮಕ ವೈಚಾರಿಕತೆಯನ್ನೇ ಅಡಿಪಾಯವಾಗಿ ಹೊಂದಿದೆ. ಅದಕ್ಕೆ ವಿರುದ್ಧವಾಗಿ, ಬಹುತ್ವ ವಾದದ ಭಾರತೀಯ ಮಾದರಿಯು ಸಮಗ್ರ ಸುಸಂಯೋಜಿತ ಅನುಭಾವದ (Organic Intuition) ಮೇಲೆ ಆಧಾರಿತವಾಗಿದೆ.

(ಮುಂದುವರಿಯುವುದು)

**ಆಕರಗಳು:**


೧. Grant S. Shokley ಅವರು ಮಾಡಿದ, John Hick ಅವರ ಹೇಳಿಕೆಯ ಉಲ್ಲೇಖ. 'Religious Pluralism and Religious Education' in Norma H. Thompson, *Religious Pluralism and Religious Education* (Burmingham, Alabama: Religious Education Press, 1988), p.141

೨. James M. Lee, "The Blessings of Religious Pluralism", in Norma H. Thompson, *Religious Pluralism and Religious Education* (Burmingham, Alabama: Religious Education Press, 1988), p.60

೩. Grant S. Shokley, 'Religious Pluralism and Religious Education' in Norma H. Thompson, *Religious Pluralism and Religious Education* (Burmingham, Alabama: Religious Education Press, 1988), p.141

೪. ಅದೇ, ಪುಟ ೧೪೬

೫. ಕೊಪರ್ನಿಕಸ್ ಎಂಬ ವಿಜ್ಞಾನಿ ಮೊದಲ ಬಾರಿಗೆ ಸೂರ್ಯನ ಸುತ್ತಲೂ ಭೂಮಿ ಸುತ್ತುತ್ತದೆ ಎಂಬ ವೈಜ್ಞಾನಿಕ ಸತ್ಯವನ್ನು ಸಾಧಿಸಿ ತೋರಿಸಿದನು. ಇದು ವೈಜ್ಞಾನಿಕ ಯುಗದಲ್ಲಿ ಕ್ರಾಂತಿಯನ್ನೇ ಉಂಟುಮಾಡಿತು.

೬. John Hick, *God has many Names.* (London: Paul and MacMillan), p.141

೭. James M Lee, " The Blessings of Religious Pluralism", in Norma H. Thompson, *Religious Pluralism and Religious Education* ( Burmingham, Alabama: Religious Education Press, 1988), pp.59-71

೮. 'ಪಾದೋಽಸ್ಯ ವಿಶ್ವಾ ಭೂತಾನಿ, ತ್ರಿಪಾದಸ್ಯಾಮೃತಂ ದಿವಿ' – ಪುರುಷಸೂಕ್ತ


---

## ಮೈಸೂರು ಶ್ರೀರಾಮಕೃಷ್ಣ ಆಶ್ರಮದ ವಾರ್ಷಿಕೋತ್ಸವ ಕಾರ್ಯಕ್ರಮಗಳು

ಪ್ರತಿದಿನ ಸಂಜೆ 5.30 ರಿಂದ 6.15: **ಭಜನೆ/ ಸಂಗೀತ ಕಾರ್ಯಕ್ರಮ;** 6–15 ರಿಂದ 7.00 : **ಮೊದಲನೆಯ ಪ್ರವಚನ;**
7.00 ರಿಂದ 7.15: **ಸಂಧ್ಯಾರತಿ ;** 7.15 ರಿಂದ 8.00 : **ಎರಡನೆಯ ಪ್ರವಚನ** (ಎಲ್ಲ ಪ್ರವಚನಗಳೂ ಕನ್ನಡದಲ್ಲಿರುತ್ತವೆ. )

**ಸೋಮವಾರ 10-3-2008**

ಭಜನೆ : ವಿವೇಕಾನಂದ ಯೂತ್ ಫೋರಂನ ಸದಸ್ಯರಿಂದ
ಉಪನ್ಯಾಸ : *'ಆದರ್ಶಮಾತೆ ಶ್ರೀಮಾತೆ'*
ಡಾ. ಪದ್ಮಾ
*ನಿವೃತ್ತ ಪ್ರಾಂಶುಪಾಲರು, ಮಹಾರಾಜ ಕಾಲೇಜು, ಮೈಸೂರು*
ಉಪನ್ಯಾಸ : *'ವೇದಾಂತಭಾಷ್ಯ ಶ್ರೀರಾಮಕೃಷ್ಣ'*
ಡಾ. ಹೆಚ್. ಎಸ್. ರಮೇಶ, *ಖ್ಯಾತ ವಾಗ್ಮಿಗಳು, ಬೆಂಗಳೂರು*

**ಮಂಗಳವಾರ 11-3-2008**

ಭಜನೆ : ಕು. ಶ್ವೇತಾ, ಅರ್ಪಣಾ ಮತ್ತು ಅಮೃತಾ
ಉಪನ್ಯಾಸ : *'ಶ್ರೀಮಾತೆಯವರ ಸೇವಾಭಾವ'*
ಶ್ರೀಮತ್ ಸ್ವಾಮಿ ಹೃದಾನಂದಜಿ ಮಹಾರಾಜ್
*ರಾಮಕೃಷ್ಣ ಮಿಷನ್, ಶಿವನಹಳ್ಳಿ, ಬೆಂಗಳೂರು*
ಉಪನ್ಯಾಸ : *'ಭಾವಸಾಗರ ಶ್ರೀರಾಮಕೃಷ್ಣ'*
ಶ್ರೀಮತ್ ಸ್ವಾಮಿ ಅನುಪಮಾನಂದಜಿ ಮಹಾರಾಜ್
*ರಾಮಕೃಷ್ಣ ಮಠ, ಹೈದರಾಬಾದ್*

**ಬುಧವಾರ 12-3-2008**

ಭಜನೆ : ಶ್ರೀ ಸಚ್ಚಿದಾನಂದವಿಠಲದಾಸ
*ಶ್ರೀರಾಮಕೃಷ್ಣ ವಿದ್ಯಾಶಾಲಾ, ಮೈಸೂರು*
ಉಪನ್ಯಾಸ : *'ದೀನಬಂಧು ವಿವೇಕಾನಂದ'*
ಶ್ರೀಮತ್ ಸ್ವಾಮಿ ಅನುಪಮಾನಂದಜಿ ಮಹಾರಾಜ್
ಉಪನ್ಯಾಸ : *'ವಿವೇಕಾನಂದರ ಧೀಮಂತ ವ್ಯಕ್ತಿತ್ವ'*
ಡಾ. ಹೆಚ್. ವಿ. ನಾಗರಾಜರಾವ್
*ನಿವೃತ್ತ ಸಂಶೋಧಕರು, ಪ್ರಾಚ್ಯ ಸಂಶೋಧನಾ ಕೇಂದ್ರ, ಮೈಸೂರು*

**ಗುರುವಾರ 13-3-2008**

5.30 - 7.00 ಸಂಗೀತ:
ಶ್ರೀ ವಿಜಯರಾಘವನ್, *ಖ್ಯಾತ ಗಾಯಕರು, ಮೈಸೂರು*
7.15 - 8.00 ಉಪನ್ಯಾಸ : *'ಶ್ರೀರಾಮಕೃಷ್ಣರ ಮಾನವೀಯ ವ್ಯಕ್ತಿತ್ವ'*
ಶ್ರೀಮತ್ ಸ್ವಾಮಿ ಹೃದಾನಂದಜಿ ಮಹಾರಾಜ್

**ಶುಕ್ರವಾರ 14-3-2008**

5.30 - 7.00 ಸಂಗೀತ : ಶ್ರೀ ದತ್ತಾತ್ರೇಯ ವೇಲಣಕರ್, ಬೆಂಗಳೂರು
7.30 - 8.30 ವೀಡಿಯೋ ಪ್ರದರ್ಶನ: *'ಭಾರತೀಯ ಆಧ್ಯಾತ್ಮಿಕ ಸಂಸ್ಕೃತಿ'*

**ಶನಿವಾರ 15-3-2008**

ಭಜನೆ : ರಾಮಕೃಷ್ಣ ವಿದ್ಯಾಕೇಂದ್ರದ ಬಾಲಕಿಯರಿಂದ
ಉಪನ್ಯಾಸ : *'ವಿವೇಕಾನಂದರ ವ್ಯಕ್ತಿತ್ವದ ಹಲವು ಮುಖಗಳು'*
ಡಾ. ಅನಂತರಾಮು, *ಖ್ಯಾತ ವಾಗ್ಮಿಗಳು, ಮೈಸೂರು*
ಉಪನ್ಯಾಸ : *'ಶ್ರೀಮಾತೆ : ಸಹನೆಯ ಸಾಕಾರಮೂರ್ತಿ'*
ಶ್ರೀಮತ್ ಸ್ವಾಮಿ ಸುಖಾತ್ಮಾನಂದಜಿ ಮಹಾರಾಜ್
*ಅಧ್ಯಕ್ಷರು, ರಾಮಕೃಷ್ಣ ಮಠ, ಉದಕಮಂಡಲ*

**ಭಾನುವಾರ 16-3-2008**

5.30 - 7.00 ಹಿಂದೂಸ್ತಾನಿ ಬಾನ್ಸುರಿ ವಾದನ :
ಶ್ರೀ ರವಿಶಂಕರ ಮಿಶ್ರ, ಮೈಸೂರು
7.15 - 8.15 ಉಪನ್ಯಾಸ : *'ಧರ್ಮದ ಯಥಾರ್ಥರೂಪ'*
ಪರಮಪೂಜ್ಯ ಶಿವಾನುಭವ ಚರಮೂರ್ತಿ ಶಿವರುದ್ರಮಹಾಸ್ವಾಮಿಗಳು
*ಬೇಲಿ ಮಠ ಮಹಾಸಂಸ್ಥಾನ, ಬೆಂಗಳೂರು*